**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **568** |
| **ಸದಸ್ಯರ ಹೆಸರು** | : | **ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **14.08.2025** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿಯವರು** |

*******

| **ಕ್ರ.ಸಂ** | **ಪ್ರಶ್ನೆ** | **ಉತ್ತರ** |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ರಚನೆ ಮಾಡಲು ಪ್ರಾಥಮಿಕ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಹೊರಡಿಸಿದೆ; ಎಷ್ಟು ಎಕರೆಗೆ ಅಧಿಸೂಚನೆ ಹೊರಡಿಸಲಾಗಿತ್ತು; (ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಬಿಡಿಎ ಕಾಯ್ದೆ 1976ರ ಕಲಂ 17 (1) & (3) ರಡಿ ದಿನಾಂಕ: 21.05.2008 ರಂದು ಒಟ್ಟು 4814ಎಕರೆ 15ಗುಂಟೆ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಅಧಿಸೂಚನೆಯ ಪ್ರತಿಯನ್ನು (**ಅನುಬಂಧ-1**) ಸಿ.ಡಿ. ರೂಪದಲ್ಲಿ ಒದಗಿಸಲಾಗಿದೆ. |
| ಆ | ಈ ಬಡಾವಣೆಯ ಅಂತಿಮ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಹೊರಡಿಸಲಾಗಿತ್ತು ಹಾಗೂ ಅಂತಿಮ ಅಧಿಸೂಚನೆಯಲ್ಲಿ ಎಷ್ಟು ಎಕರೆಗೆ ಅಧಿಸೂಚನೆ ಹೊರಡಿಸಲಾಗಿತ್ತು; (ಮಾಹಿತಿಯ ದಾಖಲೆಗಳೊಂದಿಗೆ ವಿವರಣೆ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ ಕಲಂ.19(1)ರಡಿಯಲ್ಲಿ ದಿನಾಂಕ:18.02.2010 ರಂದು 4043 ಎಕರೆ 27ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಧಿಸೂಚನೆಯ ಪ್ರತಿಯನ್ನು (**ಅನುಬಂಧ-2**) ಸಿ.ಡಿ. ರೂಪದಲ್ಲಿ ಒದಗಿಸಲಾಗಿದೆ. |
| ಇ | ಈ ಬಡಾವಣೆಗೆ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಪೂರ್ಣ ಪ್ರಮಾಣದಲ್ಲಿ ನಿವೇಶನಗಳನ್ನು ರಚನೆ ಮಾಡಿ ಹಂಚಿಕೆ ಮಾಡಲಾಗಿದೆಯೇ: (ವಿವರ ನೀಡುವುದು) | • ಅಂತಿಮ ಅಧಿಸೂಚನೆ ಹೊರಡಿಸಲಾದ ಜಮೀನಿನ ವಿಸ್ತೀರ್ಣ - 4043ಎಕರೆ 27ಗುಂಟೆ.<br>• ಭೂಸ್ವಾಧೀನ ಪ್ರಕ್ರಿಯೆ ಅಂತಿಮಗೊಳಿಸಿ ಇಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಿದ ಜಮೀನಿನ ವಿಸ್ತೀರ್ಣ-2806ಎಕರೆ 08ಗುಂಟೆ.<br>• ರಚಿಸಲಾಗಿರುವ ಒಟ್ಟು ನಿವೇಶನಗಳ ಸಂಖ್ಯೆ: - 30296<br>• ಹಂಚಿಕೆ/ಹರಾಜು ಮಾಡಲಾಗಿರುವ ಒಟ್ಟು ನಿವೇಶನಗಳ ಸಂಖ್ಯೆ: 22481 |

<table>
<tr>
<td>ಈ</td>
<td>ಶಿವರಾಮ ಕಾರಂತ ಬಡಾವಣೆಯನ್ನು ರಚನೆ ಮಾಡಲು ಭೂಮಿಯ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಹೊರಡಿಸಲಾಗಿತ್ತು; (ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು)</td>
<td>ಡಾ|| ಕೆ. ಶಿವರಾಮಕಾರಂತ ಬಡಾವಣೆ ರಚನೆಗಾಗಿ ಹೊರಡಿಸಲಾಗಿರುವ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಗಳ ವಿವರಗಳು ಕೆಳಕಂಡಂತಿವೆ.
<table>
<tr><th>ಯೋಜನೆಯ ಹೆಸರು</th><th>ಪ್ರಾಥಮಿಕ ಅಧಿಸೂಚನೆ ದಿನಾಂಕ</th><th>ಅಂತಿಮ ಅಧಿಸೂಚನೆ ದಿನಾಂಕ</th></tr>
<tr><td>ಡಾ|| ಕೆ.ಶಿವರಾಮ ಕಾರಂತ ಬಡಾವಣೆ</td><td>ದಿನಾಂಕ:30.12.2008</td><td>ದಿನಾಂಕ:30.10.2018.</td></tr>
<tr><td>ಡಾ|| ಕೆ.ಶಿವರಾಮ ಕಾರಂತ ಬಡಾವಣೆಯಲ್ಲಿ ಸಂಪರ್ಕವನ್ನು ಸುಧಾರಿಸಲು ಆರ್.ಎಂ.ಪಿ-2015ರಸ್ತೆ ಮತ್ತು ಬೈಪಾಸ್ ರಸ್ತೆ</td><td>ದಿನಾಂಕ:18.02.2022</td><td>ದಿನಾಂಕ:06.08.2022</td></tr>
<tr><td>ಡಾ|| ಕೆ.ಶಿವರಾಮ ಕಾರಂತ ಬಡಾವಣೆ (ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯಲ್ಲಿ ಬಿಟ್ಟುಹೋದ ಭೂಮಿಯನ್ನು ಬಡಾವಣೆಯೊಳಗೆ ಗುರುತಿಸಲಾಗಿದೆ)</td><td>ದಿನಾಂಕ:19.08.2022</td><td>ದಿನಾಂಕ:18.10.2022</td></tr>
</table>
ಅಧಿಸೂಚನೆಯ ಪ್ರತಿಗಳನ್ನು (ಅನುಬಂಧ-3) ಸಿ.ಡಿ. ರೂಪದಲ್ಲಿ ಒದಗಿಸಲಾಗಿದೆ.</td>
</tr>
<tr>
<td>ಉ</td>
<td>ಈ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು: ಇನ್ನು ಹಂಚಿಕೆ ಮಾಡಲು ಬಾಕಿಯಿರುವ ನಿವೇಶನಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)</td>
<td>ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ: 252/2017ರಲ್ಲಿ 'Status quo' ಆದೇಶ ನೀಡಿರುವುದರಿಂದ, ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.</td>
</tr>
</table>

**ಸಂಖ್ಯೆ**: ನಅಇ 528 ಬೆಂಭೂಸ್ವಾ 2025

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ